ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಜವಳಿ ಪಾರ್ಕ್' ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಆ) ಹಾಗಿದ್ದಲ್ಲಿ, ಉದ್ದೇಶಿತ ಜವಳಿ ಪಾರ್ಕ್‌ನ್ನು ಜಿಲ್ಲೆಯ ಯಾವ ಭಾಗದಲ್ಲಿ ಸ್ಥಾಪಿಸಲಾಗುವುದು (ವಿವರ ನೀಡುವುದು) ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮಂಗಳೂರಿನ ಕಂದಾಯ ಇಲಾಖೆಯ ಭೂಮಿ

747(1119) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಮಂಗಳೂರಿನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಎಷ್ಟಿದೆ (ವಿವರ ನೀಡುವುದು) ;

ಆ) ಈ ಸರ್ಕಾರಿ ಭೂಮಿಯ ಬಂದೋಬಸ್ತ್‌ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಇ) ಈ ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ನೀಡಲು ಯಾವ ನಿಯಮಗಳು ಜಾರಿಯಲ್ಲಿವೆ (ವಿವರ ನೀಡುವುದು) ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 10300–2197 ಎಕರೆ ಸರಕಾರಿ ಭೂಮಿ ಇರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) 10300.2197 ಎಕರೆ ಸರಕಾರಿ ಜಮೀನಿನಲ್ಲಿ ನಮೂನೆ 53 ರಲ್ಲಿ ಅಕ್ರಮ–ಸಕ್ರಮದಡಿ ಬಾಕಿ ಇರುವ 1460 ಅರ್ಜಿಗಳ ಬಾಬ್ತು 4006.69 ಎಕರೆ ಜಮೀನು ಒಳಗೊಂಡಿದ್ದು, ನಮೂನೆ 53 ರ ಅರ್ಜಿಗಳು, ಇತ್ಯರ್ಥ ವಾಗದಿರುವುದರಿಂದ ಈ 4006.69 ಎಕರೆ ಜಮೀನಿನ ಬಂದೋಬಸ್ತಿಗೆ ಈಗ ಕ್ರಮಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಉಳಿಕೆ 6293.53 ಎಕರೆ ಸರಕಾರಿ ಜಮೀನಿನ ಅತಿಕ್ರಮಣವಾಗದಂತೆ ಸಂರಕ್ಷಿಸಲು ಕರ್ನಾಟಕ ಭೂ

ಕಂದಾಯ ಕಾಯಿದೆ 1964ರ ಕಲಂ 94 ಮತ್ತು 192ಎ ರಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈ ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ನೀಡಲು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 71 ಅನ್ವಯಿಸುತ್ತದೆ.

ಅನುಬಂಧ

ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಸರಕಾರಿ ಭೂಮಿಯ ವಿಸ್ತೀರ್ಣ 10300.2197 ಎಕರೆ ಇರುತ್ತದೆ. ಗ್ರಾಮವಾರು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಗ್ರಾಮ	ವಿಸ್ತೀರ್ಣ
1.	ಪಾವೂರು	1009.760
2.	ಪಡುಕೋಡಿ	281.3525
3.	ದೇರೆಬೈಲು	145.5500
4.	ಬಂಗ್ರಕೂಳೂರು	166.4500
5.	ತಲಪಾಡಿ	301.9000
6.	ಮರೋಳಿ	31.1756
7.	ಕೋಟೆಕಾರು	281.7500
8.	ಕಂಕನಾಡಿ ಬಿ	113.8793
9.	ಕಿನ್ಯಾ	214.3000
10.	ಅಳಪೆ	274.9488
11.	ಕಂಕನಾಡಿ–ಎ	2.1930
12.	ಮುನ್ನೂರು	388.2900
13.	ಬೆಳ್ಮೆ	172.2700
14.	ಕಣ್ಣೂರು	234.5900
15.	ಹರೇಕಳ	642.9200
16.	ಅಂಬ್ಲಮೊಗರು	143.1800
17.	ಪೆರ್ಮನ್ನೂರು	169.5128
18.	ಉಳ್ಳಾಲ	601.7550

ಕ್ರ.ಸಂ.	ಗ್ರಾಮ	ವಿಸ್ತೀರ್ಣ
19.	ಸೋಮೇಶ್ವರ	159.6000
20.	ಕೋಣಾಜಿ	687.2100
21.	ಮಂಜನಾಡಿ	205.8023
22.	ಬೋಳೀಯಾರು	172.9300
23.	ಸಜೀವ ಪಡು	22.30
24.	ಚೇಳೂರು	44.50
25.	ನರಿಂಗಾನ	252.14
26.	ಕೈರಂಗಳ	102.68
27.	ಮೇರಮಜಲು	182.76
28.	ಕೊಡ್ಮಣ್	31.69
29.	ಫಜೀರು	344.20
30.	ಕುರ್ನಾಡು	41.40
31.	ಬಾಳೆಪುಣೆ	243.12
32.	ಕಳ್ಳಿಗೆ	135.10
33.	ಸಜೀವನಡು	12.25
34.	ಪುದು	96.27
35.	ಇರಾ	390.59
	ಒಟ್ಟು	10300.2197

ವನ ಮಹೋತ್ಸವವನ್ನು ಆಚರಿಸುವುದು

748(1120) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ರಾಜ್ಯ ಸರ್ಕಾರ ಪ್ರತಿ ವರ್ಷ ವನಮಹೋತ್ಸವವನ್ನು ಆಚರಿಸುತ್ತಿದೆಯೇ ;

ಆ) ಹಾಗಿದ್ದಲ್ಲಿ, ವನಮಹೋತ್ಸವ ಆಚರಣೆಗೆ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ ;